


ಎಡದಿಂದ ಬಲಕ್ಕೆ:

1. ಆಪ್ತರನ್ನು ದೂರಮಾಡಿದ್ದಕ್ಕೆ ಆತನಿಗೆ ಈಗ ವಿಷಾದ 4
3. ಎಷ್ಟು ಬಿರುಸಾಯಿತು ನೋಡಿ, ಸುವಾಸನೆ 3
4. ಸಸ್ಯಲೋಕಕ್ಕೆ ಹೊಸ ವಸನ ತೊಡಿಸುವ ಸುಂದರ ಋತುಮಾನ 3
6. ಗಮನವಿಡಿ, ಆತನೊಬ್ಬ ನಾಚಿಕೆಗೆಟ್ಟ ವ್ಯಕ್ತಿ 4
7. ಶಂಭುವಿನ ಪೂಜೆಗೈದಂದೇ 'ಒಳ್ಳೆಯ ದಿವಸ' 4
9. ಅವನ ಸ್ವರ ಸ್ವರದಲ್ಲೂ ದೇವ ರಕ್ಕಸ ಸಂಯೋಗ 4
12. ಸ್ತುತಿಸುವವರಿಗೆಲ್ಲ ಇಷ್ಟವಾದಳು 'ಪರ್ವತದ ಮಗಳು' ಪಾರ್ವತಿ 4
15. ಅರಣ್ಯಕ್ಕೆ ಹೋಗಿ ಬರುವಾಗಲೂ ಒಡವೆ ಬೇಕೇ? 4
17. ಕೋಡಗಕ್ಕೆ ಒಳ್ಳೇ ತಿನಿಸು ; ಬೇರಿನಲ್ಲಿ ಬಿಡುವ ಈ ತರಕಾರಿ 4
18. ದಿಬ್ಬವನ್ನು ಅಗೆವ ಕೆಲಸಕ್ಕೆ ತಳಹದಿ ಹೇಗೆ? 3
19. ವಿಪಿನವನ್ನು ಕಾಪಾಡುವ ಕಾರ್ಯ ಪವಿತ್ರವಾದದ್ದು 3
20. ಕಾಡಿನ ಮೇಲೆ ಸೇಡು ತೋರಿದ್ದಕ್ಕೆ ಸ್ಮಶಾನವೇ ಹಿಂದುಮುಂದು 4

ಮೇಲಿಂದ ಕೆಳಕ್ಕೆ:

1. ನಿಷ್ಠೆಯಿಂದ ಅಭ್ಯಾಸಮಾಡುವವನ ಬಗೆಗೆತುಂಬ ಪ್ರೀತಿ, ಗೌರವ 4
2. ಪೀಡಿಸುವವರನ್ನು ಗೆದ್ದು ಬಂದ ನಂತರ ಮಲಗು 4
3. ಬೇಲಿಯನ್ನು ಸುತ್ತಿ ಬರುವ ಕೆಲಸದಲ್ಲಿ ಕಿಂಚಿತ್ತೂ ತ್ರಾಸ ಇಲ್ಲ 3
5. ರುಚಿಕರ ಊಣಿಸನ್ನು ನೀಡಿ ಸಮಾಧಾನಪಡಿಸು 3
7. ಆ ಶೂರ ಮಹಿಳೆ, ಎಲ್ಲ ಭಂಗಿಗಳಲ್ಲೂ ಬಹು ಚೆಲುವೆ 3
8. ಆ ಸರ್ವಾಧಿಕಾರಿಯದು ಇದೆಂಥ ಉಡುಪು? 3
9. ಸರ್ವರಿಗೂ ಭಯ ಬರಿಸುತ್ತಿದೆ, ಕತ್ತೆ 3
11. ರಣರಂಗದಿಂದ ಮರಳಿ ಬಂದಿದ್ದಾನೆ ಆಕೆಯ ಗಂಡ 3
13. ಬಾರಿ ಬಾರಿಗೂ ತಲೆಕೆಳಗಾಗುತ್ತಿದೆ, ಗಿರಿ ಗಿರಿ ಸುತ್ತುವ ಆಟಿಗೆ 3
14. ತಂಗುವ ಕಡೆ ಬೇಕಾಗುವ ವಸ್ತುಗಳನ್ನು ಬೇರೆಯಾಗಿ ಎತ್ತಿ ಇಡು 4
15. ಹಸುಗೂಸುಗಳು ಇರುವ ಮನೆಗಳೇ ಅಲ್ಲಿ ಅಕ್ಕ ಪಕ್ಕ 4
16. ನಟರ ಮನೆಯಲ್ಲಿ ಅದೇನು ಸದಾ ಕೂಗಾಟ, ಗದ್ದಲ? 3

## 17–06– 2021 ಉತ್ತರಗಳು

ಎಡದಿಂದ ಬಲಕ್ಕೆ:

1. ಅಧಿಪತಿ 3. ಕರಂಡ 4. ಗಳಿಕೆ 6. ವಿತರಣೆ 7. ಅಂದಗಾರ 8. ಶುಕವಿಧ (ಶುಕ=ಗಿಣಿ) 10. ಕುಮುದಿನಿ 12. ಹೇಮಾವತಿ 14. ಸಂಹಾರಕ 16. ಣರಚ (=ಚರಣ ಹಿಂದುಮುಂದು ) 17. ದಮನ 18. ಯಕ್ಷಗಾನ

ಮೇಲಿಂದ ಕೆಳಕ್ಕೆ:

1. ಅಡವಿ 2. ತಿಗಣೆ 3. ಕಡೆಗಾಲ 5. ಕೆಡುಕ 7. ಅಂಕುಡೊಂಕು 9. ಧನಪತಿ 11. ದಿಬ್ಬಣ 13. ಸಮಾಧಾನ 14. ಸಂಚಯ 15. ಕದನ

ಪ್ರಶ್ನಾಂಕಣ

# ಹಣ್ಣುಗಳಲ್ಲಿ ಎಷ್ಟು ಬಗೆ?

ಅದನ್ನು ಊಹಿಸುವುದೂ ಅಸಾಧ್ಯ; ಹೇಳಿದರೂ ಒಪ್ಪುವುದೂ ಅಷ್ಟೇ ಅಸಾಧ್ಯ. ಏಕೆಂದರೆ, ಎಲ್ಲ ಹಣ್ಣುಗಳ ಪರಿಚಯ ಯಾರಿಗೂ ಇಲ್ಲ. ಅಷ್ಟೇ ಅಲ್ಲ, ಬೇಕಾದಷ್ಟು ಹಣ್ಣುಗಳು ಹಣ್ಣುಗಳೆಂಬುದೇ ಎಲ್ಲರಿಗೂ ತಿಳಿದಿಲ್ಲ!

ವಾಸ್ತವ ಏನೆಂದರೆ, ಧರೆಯ ಸಸ್ಯ ಸಾಮ್ರಾಜ್ಯದಲ್ಲಿ ಸುಮಾರು 3,20,000 ಸಸ್ಯ ಪ್ರಭೇದಗಳಿವೆ. ಅವುಗಳಲ್ಲಿ 2,90,000 ಪ್ರಭೇದಗಳ ಸಸ್ಯಗಳು ಹೂವುಗಳನ್ನು ಅರಳಿಸುತ್ತವೆ. ಹಾಗೆ ಹೂ ಬಿಡುವ ಎಲ್ಲ ಗಿಡಮರಗಳಲ್ಲೂ ಹಣ್ಣುಗಳು ಮೈದಳೆಯುತ್ತವೆ. ಹಾಗೆಂದರೆ ಹಣ್ಣುಗಳಲ್ಲಿ ಎರಡು ಲಕ್ಷ ತೊಂಬತ್ತು ಸಾವಿರ ಬಗೆಗಳಿವೆ ಎಂದಾಯಿತು (ಮಾವು, ಹಲಸುಗಳ ವೃಕ್ಷಗಳು ಮತ್ತು ಕಿತ್ತಳೆಯ ಗಿಡ ಚಿತ್ರಗಳಲ್ಲಿವೆ). ಇಷ್ಟೊಂದು ವಿಧದ ಹಣ್ಣುಗಳಿವೆ ಎಂಬುದನ್ನು ಯಾರೂ ನಂಬುವುದಿಲ್ಲ. ಏಕೆಂದರೆ, ಸಾಮಾನ್ಯವಾಗಿ ಸಿಹಿಯಾದ, ಕಹಿಯಾದ ಅಥವಾ ಹುಳಿಯಾದ ರಸಭರಿತ ತಿರುಳಿನಿಂದ ಕೂಡಿದ ಸಸ್ಯೋತ್ಪನ್ನಗಳನ್ನಷ್ಟೇ ಹಣ್ಣುಗಳೆಂದು ಭಾವಿಸುವುದು ಸಾರ್ವತ್ರಿಕವಾಗಿ ರೂಢಿಯಲ್ಲಿದೆ. ಇಂಥ ಹಣ್ಣುಗಳ ವಿಧಗಳು ಸುಮಾರು 2,000 ಅಷ್ಟೆ.

ಆದರೆ ವೈಜ್ಞಾನಿಕವಾಗಿ ನಿರೂಪಿಸಬೇಕೆಂದರೆ ಫಲವಂತವಾದ ಹೆಣ್ಣು ಹೂವಿನ ಪರಿಪಕ್ವ ಬೀಜ ಸಹಿತ ಅಂಡಾಶಯವೇ ಹಣ್ಣು. ಹಣ್ಣುಗಳು ಮೆತ್ತಗಿನ ತಿರುಳಿನಿಂದ ಕೂಡಿರಬಹುದು ಅಥವಾ ಗಟ್ಟಿಯಾಗಿರಬಹುದು ; ರಸಭರಿತವಾಗಿರಬಹುದು ಅಥವಾ ಸಂಪೂರ್ಣ ಒಣಗಿದಂತಿರಬಹುದು; ಸಿಹಿ, ಕಹಿ, ಹುಳಿ ಇತ್ಯಾದಿ ರುಚಿಯನ್ನು ಪಡೆದಿರಬಹುದು ಅಥವಾ ಸಪ್ಪೆಯಾಗಿರಬಹುದು.

ಆದ್ದರಿಂದಲೇ ಮಾವು, ಕಿತ್ತಳೆ, ಬಾಳೆ, ಸೇಬು, ಹಲಸು, ದ್ರಾಕ್ಷೆ,




ಟೊಮ್ಯಾಟೋ ಇತ್ಯಾದಿಗಳಂತೆಯೇ ಭತ್ತ, ರಾಗಿ, ಗೋಧಿ ಇತ್ಯಾದಿ ಧಾನ್ಯಗಳು, ಹುರುಳಿ, ಹಾಗಲ, ಬಟಾಣಿ, ಸೌತೆ, ಕುಂಬಳ ಇತ್ಯಾದಿ 'ತರಕಾರಿಗಳು', ತೆಂಗು, ಬಾದಾಮಿ ಇತ್ಯಾದಿ ಗಟ್ಟಿ ಸೃಷ್ಟಿಗಳು ..... ಇವೆಲ್ಲವೂ ವಾಸ್ತವವಾಗಿ ಹಣ್ಣುಗಳೇ ಆಗಿವೆ!

ಒಂದೆರಡು ಸೋಜಿಗದ ಅಂಶಗಳು : ಅತ್ಯಂತ ದೊಡ್ಡ ಗಾತ್ರದ ಹಣ್ಣು ಕುಂಬಳ, ಸಿಹಿಗುಂಬಳವೊಂದು 1190.5 ಕಿಲೋ ತೂಕ ಮುಟ್ಟಿರುವ ವಿಶ್ವ ದಾಖಲೆ ಇದೆ ! ವೃಕ್ಷದಲ್ಲಿ ಬಿಡುವ ಅತ್ಯಂತ ದೈತ್ಯ ಹಣ್ಣು 'ಹಲಸು' (ವಿಶ್ವ ದಾಖಲೆ 52.35 ಕಿಲೋ)! ಜಗದಾದ್ಯಂತ ಅತ್ಯಂತ ಹೆಚ್ಚು ಬಳಕೆಯ ಪ್ರಥಮ ಸ್ಥಾನದಲ್ಲಿರುವ ಹಣ್ಣು 'ಟೊಮ್ಯಾಟೋ' ; ಅದರ ಸರಾಸರಿ ವಾರ್ಷಿಕ ಬಳಕೆ 18.2 ಕೋಟಿ ಟನ್! ದ್ವಿತೀಯ ಸ್ಥಾನದಲ್ಲಿರುವುದು 'ಬಾಳೆ ಹಣ್ಣು' (ವಾರ್ಷಿಕ ಸರಾಸರಿ ಸಂಖ್ಯೆ ಹತ್ತು ಸಾವಿರ ಕೋಟಿ, ಒಟ್ಟು ತೂಕ 11.6 ಕೋಟಿ! ಅತ್ಯಂತ ಪುಟ್ಟ ಹಣ್ಣು' ಗ್ಲೋಬೋಸಾ'. ಈ ಹಣ್ಣಿನ ಸರಾಸರಿ ಉದ್ದ 0.3 ಮಿಲಿ ಮೀಟರ್ ; ಒಂದೇ ಒಂದು ಗ್ರಾಂ ತೂಗಲು 10 ಲಕ್ಷ ಹಣ್ಣುಗಳು ಬೇಕು!

■ ಎನ್. ವಾಸುದೇವ್